**ಸಾಕ್ಷಿಯನ್ನು ದಿನಾಂಕ 17-06-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ ವಕೀಲರಿಂದಃ**

1. ನನಗೆ ಕಲ್ಲಿಹಾಳ್ ಗ್ರಾಮದ ಸರ್ವೆ ನಂಬರ್ 80, 17 ಮತ್ತು 62 ರಲ್ಲಿ ಜಮೀನು ಇದೆ. ಸದರಿ ಜಮೀನುಗಳು ಸರ್ವೆ ನಂಬರ್ 20 ರ ಅಜೂ-ಬಾಜಿನಲ್ಲಿಲ್ಲ ಎಂದರೆ ಸರಿ. ವಾದಿಗೆ ಸರ್ವೆ ನಂಬರ್ 20 ರಲ್ಲಿ 16 ಗುಂಟೆ ಜಮೀನು ಇದೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಪೈಕಿ ಪ್ರತಿವಾದಿ 7 ಗುಂಟೆ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 30-40 ವರ್ಷಗಳ ಹಿಂದೆ ಪ್ರತಿವಾದಿಯ ಕುಟುಂಬದವರು ತಮ್ಮ ಜಮೀನು ಖರಿದಿ ಮಾಡಿದ ದಿನದಿಂದ ಇಲ್ಲಿಯವರೆಗೆ ಅವರ ಜಮೀನಿನ ಅಜೂ-ಬಾಜಿನಲ್ಲಿ ವಾದಿಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿ 7 ಗುಂಟೆ ಜಮೀನು ಒತ್ತುವರಿ ಮಾಡಿದ್ದಾರೆ ಎಂದು ತೋರಿಸುವ ಸರ್ವೆ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯನ್ನು ವಾದಿ ನ್ಯಾಯಾಲಯಕ್ಕೆ ಕೊಟ್ಟಿದ್ದಾರೆ. ತಮ್ಮ ಜಮೀನಿನ ಅಳತೆಗಾಗಿ ವಾದಿ ತತ್ಕಾಲ್ ಪೋಡಿ ಅರ್ಜಿ ಕೊಟ್ಟಿದ್ದಾಗ ನಾನು ಸಹ ಅವರ ಜೊತೆ ಸರ್ಕಾರಿ ಕಚೇರಿಗಳಿಗೆ ಓಡಾಡಿದ್ದೆ ಎಂದರೆ ಸರಿ. ಅಳತೆ ನಂತರ ಪಹಣಿಯಲ್ಲಿ ನಮೂದಿಸಿರುವ ವಿಸ್ತೀರ್ಣದಲ್ಲಿ ವಾದಿ ಸ್ವಾಧೀನ ಇಲ್ಲ ಎಂದು ಗೊತ್ತಾಯಿತು ಎಂದರೆ ಸರಿ. ಅಳತೆ ವರದಿಯ ಮೇಲೆ ಎ.ಡಿ.ಎಲ್.ಆರ್ ರವರ ಮುಂದೆ ವಿವಾದಿತ ಪ್ರಕರಣ ನಡೆಯಿತು ಎಂದರೆ ಸರಿಯಲ್ಲ. ವಿವಾದವನ್ನು ನ್ಯಾಯಾಲಯದಲ್ಲಿ

ಬಗೆಹರಿಸಿಕೊಳ್ಳುವುದಾಗಿ ಹೇಳಿ ವಾದಿ ಎ.ಡಿ.ಎಲ್.ಆರ್ ರವರ ಮುಂದೆ ಸಲ್ಲಿಸಿದ್ದ ಅರ್ಜಿಯನ್ನು ವಾಪಸ್ಸು ಪಡೆದರು ಎಂದರೆ ಸರಿ.

3. ಸಾಮಾನ್ಯವಾಗಿ ಯಾವುದೇ ಜಮೀನಿನ ಪೋಡಿ ದುರಸ್ತಿ ಆಗದೆ ಹದ್ದು ಬಸ್ತು ಸಾಧ್ಯವಿಲ್ಲ ಎಂದರೆ ಸರಿ. ಹದ್ದು ಬಸ್ತು ಅಳತೆಗೆ ಶುಲ್ಕ ತುಂಬಿದ ನಂತರ ಅಳತೆಮಾಡಿ ಒತ್ತುವರಿ ಇದೆಯೋ ಇಲ್ಲವೋ ಎಂಬ ಬಗ್ಗೆ ತಿಳಿದುಕೊಳ್ಳಲಾಗುತ್ತದೆ ಎಂದರೆ ಸರಿ. ವಾದಿಗೆ ಸೇರಿದ ಜಮೀನು ಪೋಡಿ ದುರಸ್ತಿ ಆಗದೆ ಇರುವ ಕಾರಣ ಹದ್ದು ಬಸ್ತು ಅಳತೆ ಆಗಿಲ್ಲ ಹಾಗಾಗಿ ಅವರ ಆಸ್ತಿ ಒತ್ತುವರಿಯಾಗಿದೆ ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ವಾದಿಯ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಡಿ ದುರಸ್ತಿ ಕಾಲಕ್ಕೆ ವಾದಿಗೆ ಸೇರಿದ 7 ಗುಂಟೆ ಜಾಗವನ್ನು ಪ್ರತಿವಾದಿ ಒತ್ತುವರಿ ಮಾಡಿದ್ದಾರೆ ಎಂದು ಗೊತ್ತಾಯಿತು ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ಒತ್ತುವರಿ ಜಾಗವನ್ನು ಬಿಟ್ಟು ಕೊಡವುದಾಗಿ ಪ್ರತಿವಾದಿ ಹೇಳಿದ್ದರು ಎಂದು ನಾನು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**